# ಶ್ರೀ ವಾದಿರಾಜರ ಚರಿತಸಾರ

*ರಾಗ ಕಲ್ಯಾಣಿ ಆದಿತಾಳ*

ವಾದಿರಾಜ ಗುರುರಾಜ ನಮೋ
ಸ್ವಾದಿನಿಲಯ ಸುರಗುರುವೆ ನಮೋ
ಮೋದತೀರ್ಥ ಮತಚಂದ್ರ ನಮೋ
ಸಾಧುರಕ್ಷಕ ಮುನೀಂದ್ರ ನಮೋ ॥ ೧ ॥

ಜನನ ವಿಲಕ್ಷಣನೆನಿಸಿದೆಯೊ ಗುರು
ಘನ ಮಹಿಮಾಬ್ಧಿ ಸುನಾಮ ನಮೋ
ಮುನಿಕರುಣವೆನುವ ಗೌರಿ–ರಾಮಾಚಾರ್ಯರ
ಮನಕಾನಂದದ ಭಾವಿಸಮೀರ ನಮೋ ॥ ೨ ॥

ಮುನಿ ವಾಗೀಶರ ದಯದಿ ಕುಸುಮ ಕೆರೆ
ವರ ದಂಪತಿಗೇ ಕುಮಾರನೆನಿಸೀ
ಘನ ಕೇದಾರದಿ ಜನಿಸೆ ಸತಿಪತಿಗ–
ಳರಿತರ್ಪಿಸಿ ರಕ್ಷಿಸಿದ ಮಹಾತ್ಮ ॥ ೩ ॥

ಅರಿತು ವಾಗೀಶರು ಕನಕಭಾಜನದಿ
ತರಿಸಿ ತೊಳಿಸೆ ಕರ ಮುಗಿದ ಶಿಶೋ
ಸುರರು ಕುಸುಮ ಮಳೆಗೆರೆಯೆ ಶ್ರೀಹರಿಯ
ಸ್ಮರಿಸಿ ಭೂವರಹನೆನುತ ಕರೆದ ಗುರೋ ॥ ೪ ॥

ಉಪನಯನದಿ ಮಂತ್ರೋಪದೇಶ ಸಹ
ನಿಪುಣರ ಸಂಸ್ಥಾನದಿ ನಿಲಿಸಿ
ಸುಫಲರ ಶ್ರೀವಾದಿರಾಜರೆನೆ ಗುರು
ಕೃಪಾಪಾತ್ರಗೆ ನಮೋ ನಮೋ ॥ ೫ ॥

ವ್ಯಾಸರಾಯರಲಿ ವಿಜಯೀಂದ್ರರ ಸಹ
ವಾಸವಾಗಿದ್ದ ಕಾಲದಲಿ
ಭಾಸುರರನು ನೃಪ ಕೃಷ್ಣರಾಯ ಸಂ–

ತೋಷದಿ ಪ್ರಸಂಗಾಭರಣರೆಂದ ಗುರು ॥ ೬ ॥

ವಾಲಿಭಂಡಾರದ ರಾಮವಿಠಲ ಶ್ರೀ-
ಲೋಲನ ಪೂಜಿಸಿ ಬಹು ಧನವ
ಮೌಳಿನೃಪನಿಗಿತ್ತು ಹರ್ಷಗೊಳಿಸಿ ಆ
ಕಾಲದಲರಸನ ಸೇವೆ ಸ್ವೀಕರಿಸಿದ ॥ ೭ ॥

ಮಧ್ವಸರಸ್ಸಿಗೆ ಸೋಪಾನ ಕನಕ
ಶುದ್ಧಾಭರಣದ ಶ್ರೀಕೃಷ್ಣನಿಗೆ
ಶ್ರದ್ಧೆಯೊಳರ್ಪಿಸಿ ನೃಪನನು ಬಹು ಪರಿ
ಶುದ್ಧಾತ್ಮನ ಮಾಡಿದ ಹುರುವೆ ನಮೋ ॥ ೮ ॥

ವ್ಯಾಸರಾಯರಿಂ ವ್ಯಾಸಮುಷ್ಟಿಕೆಯ
ತಾ ಸ್ವೀಕರಿಸೀ ರಜತಪುರದಲೀ
ಮೀಸಲ ಮನದಲಿ ಪೂಜಾಪದ್ಧತಿ
ತಾ ಸಲಿಸಿದ ಹರಿಸನ್ನಿಧಿಯುತ ಗುರು ॥ ೯ ॥

ದಶಪ್ರಮತಿಗಳಿಗೊಲಿದು ಪ್ರತಿಷ್ಠಿತ
ಶಿಶು ಶ್ರೀಕೃಷ್ಣ ದುರ್ಗಾ ಬಲರಾ-
ಮ ಸುಧಾಸುರರಿಂ ಪೂಜಾಕ್ರಮ ಸಂ-
ತಸದಿ ಪದ್ಧತಿಯ ಗೈಸಿದ ಮುನಿವರ ॥ ೧೦ ॥

ವರ ದ್ವಾದಶಾಸ್ತೋತ್ರದಿ ಬಹು ವಿಷ
ಪರಿಹರವಹುದು ನಿಜವೆನುತರುಹಿ
ಸರಸದಿ ಸ್ತುತಿಸಿ ಶ್ರೀಕೃಷ್ಣನ ಪೂಜಿಸಿ
ನಿರವಧಿ ಮಹಿಮನೆಂದರುಹಿದ ಗುರೋ ॥ ೧೧ ॥
ಸೋನಗಾರನೋರ್ವ ಲೋಹವ ಕರಗಿಸಿ
ಗಣಪತಿ ವಿಗ್ರಹವನು ತೆಗೆಯೆ ಅದು
ಗುಣನಿಧಿ ಹಯಮುಖನಾಗುತಲವನಿಗೆ

ಕನಸಿನೊಳೊರೆದರ್ಪಿಸಲು ಪೂಜಿಸಿದೆ ॥ ೧೨ ॥

ಮಾಸದ್ವಯ ಪೂಜೆಯನೆರಡಬ್ದಕೆ
ತಾ ಸಮನಿಸಿ ಯತಿವರರಿಂ ನಡೆಸುತ
ಸಾಸಿರನಾಮನ ಒಲುಮೆಗೆ ಸಮಯವ
ಲೇಸು ಮಾಡಿ ನಿಲಿಸಿದ ಗುರುವರ ನಮೋ ॥ ೧೩ ॥

ಕೋಟ ಕೋಟೇಶ್ವರರ ಪರಸ್ಪರ ವಿರಸವ
ಕೂಟದಿ ಸೇರಿಸಿ ಮುದಗೊಳಿಸಿ
ನೋಟದೊಳಸ್ಪೃಶ್ಯರ ಹರಿಭಜನೆಯ
ಕೂಟದೊಳು ನಿಲಿಸಿ ಸಲಹಿದ ಯತಿವರ ॥ ೧೪ ॥

ಪುಣ್ಯಪುರದಿ ವಿದ್ವನ್ಮಣಿಗಳು ಬಹು
ಮಾನ್ಯ ರುಕ್ಮಿಣೀಶವಿಜಯವನು
ಘನ್ನವೆನ್ನುತಲಾನೆಯ ಮೇಲ್ಮೆರಸುತ
ಧನ್ಯರೆನಿಸೆ ಸನ್ಮಾನ್ಯರಾದ ಗುರೋ ॥ ೧೫ ॥

ಅಶ್ವಾರೋಹಿಯ ರಕ್ಷಣೆಯಿಂದಿಹ
ದೃಶ್ಯವ ಕಂಡಚ್ಚರಿಯಲಿ ನಮಿಸಲು
ವಿಶ್ವವಂದ್ಯ ಸಲಹಿದ ಮ್ಲೇಚ್ಛರನು
ಅಶ್ವವದನನ ಕೃಪಾಪಾತ್ರರಾದ ಗುರು ॥ ೧೬ ॥

ಕಡಲೆ ಹೂರಣವ ಶಿರದಿ ಧರಿಸೆ ಹರಿ
ಸಡಗರದಿಂ ಪದವೆರಡು ಹೆಗಲ ಮೇಲೆ
ಇಡುತ ಮೆದ್ದಿಳಿಸೆ ಭುಂಜಿಸಿ ಸಂತಸ
ಪಡುತ ನಲಿಯುತಲಿ ಧ್ಯಾನಿಪ ಯತಿವರ ॥ ೧೭ ॥
ಪುರ ಪಂಢರಿಯಲಿ ಧನಿಕನ ಕ್ಷೇತ್ರದಿ
ಪರಮ ಹಯಾಸ್ಯನು ಮೆದ್ದುದರುಹೆ ಹರಿ
ಮರುದಿನ ಗಿಡದಿ ಕನಕ ಕಡಲೆ ಕಾಣಿಸೆ

ಹರಿಗರ್ಪಿಸೆ ಧನ್ಯನ ಮಾಡಿದ ಗುರು ॥ ೧೮ ॥

ಬಾದರಾಯಣರು ಬರುತ ಪ್ರಯಾಗದಿ
ವಾದಿರಾಜ ನಿಮ್ಮ ಬದರಿಗುಯ್ಯೆ ಸನ್ನ-
ಕಾದಿ ಮಧ್ವರನು ಕಂಡು ಕರ ಮುಗಿದು
ವೇದಾರ್ಥಗಳ ವಿಚಾರದಿ ಗ್ರಹಿಸಿದ ಗುರು ॥ ೧೯ ॥

ದ್ವಾರಕ ಕಾಶೀ ಕ್ಷೇತ್ರ ವಿಪ್ರರಿಗೆ
ತಾರಕ ಮಧ್ವಾಷ್ಟಕ ಪಠನದಿ ಜ್ವರ-
ವಾರಿಸಿ ತತ್ವಪ್ರಚಾರದಿ ಹರಿಯು ಅ-
ಪಾರ ಮಹಿಮನೆಂದರುಹಿದ ಕರುಣಿ ॥ ೨೦ ॥

ಗರುಡ ಮಾರುತಿ-ಪ್ರತಿಮೆ ಅಯೋಧ್ಯಾ
ಪುರದೊಳಿದ್ದುದನು ಕೃಷ್ಣಮಂದಿರದಿ
ಇರಿಸಿ ಪ್ರತಿಷ್ಠಿಸಿ ಸುರರು ಪೊಗಳುತಿರೆ
ಹರುಷದಿ ಪೂಜೆಯ ಕ್ರಮದಿ ನಡೆಸುತಿಹ ॥ ೨೧ ॥

ತನ್ನಯ ಶಿಷ್ಯನ ಉನ್ಮತ್ತತೆಗವ-
ನನ್ನು ಬ್ರಹ್ಮರಕ್ಕಸನೆನ್ನಿಸೆ
ಬೆನ್ನ ಬೀಳೆ ಭೂತನ್ನ ಮಾಡಿಕೊಂ-
ಡುನ್ನತ ಮಹಿಮೆಯೊಳ್ಮೆರೆದೆ ಮಹಾತ್ಮ ॥ ೨೨ ॥

ಋಣಿಯಾಗಿದ್ದುದ ಸ್ಮರಿಸಿ ಸಕಾಲದಿ
ಧನವ ಗಳಿಸಿ ಹರಿಭಕುತರಿಂದ
ತ್ನುಮನ ಸೇವೆಯ ಸಲಿಸಿ ಗುರುವರಗೆ
ವಿನಯಮೂರ್ತಿ ಎನಿಸೆ ನಿಲಿಸೆ ಮೆರೆಸಿದೆ ॥ ೨೩ ॥
ಉರಗನ ಭಯಕಂಜುತ ಮೂಷಕ ಬರೆ
ಅರಿತಭಯನಿತ್ತುರಗನ ಕ್ಷುಧೆಯನು
ಹರಿಸಿ ಕರ ಫಣದೊಳಿರಿಸೆ ಹರುಷದಿಂದ

ತೆರಳುವಂತೆ ಮಾಡಿದ ಗುರುವೆ ನಮೋ ॥ ೨೪ ॥

ಭೂತಕ್ಷೇತ್ರ ತನ್ನಾಥನದೆನಿಸುತ
ಜಾತಿನೀತಿಯರಿತನ್ನದಾನದಲಿ
ಖ್ಯಾತಿಮಹಂತರ ವಚನವೆ ಸತ್ಯವು
ಈ ತೆರ ಸಂತತವಿರುವಂತೆಸಗಿದೆ ॥ ೨೫ ॥

ಕುಮಾರಧಾರಾ ನೇತ್ರಾವತಿ ಸಂ–
ಗಮದೀ ದಂಡತೀರ್ಥವ ರಚಿಸೀ
ಉಮಾಪತಿಗೆ ಅಭಿಷೇಕವ ಗೈಸಿದ
ಸಮೀರಪದ ಭಕುತರ ಪಾಲಿಸುವೆ ॥ ೨೬ ॥

ಸ್ವಚ್ಛ ಮಹಿಮರಿಗೆ ಪಚ್ಚೆವಿಟ್ಠಲನ
ಸ್ವೇಚ್ಛೆಯೊಳರ್ಪಿಸಿ ಪೂಜಿಸುತ
ಮತ್ಸರವಿರಹಿತ ಜೈನ ನೃಪತಿಯನು
ಮೆಚ್ಚಿ ಭಕುತನೆನಿಸಿದೆ ಗುರುಮುನಿಯೆ ॥ ೨೭ ॥

ಋಣದಾರಿದ್ರ್ಯವು ಕುಷ್ಟರೋಗಗಳು
ಘನ ಮೃತ್ತಿಕೆಯಿಂದ ಪರಿಹರವು
ಜನರನುಭವ ಕಾರಣ ಗುರುಭಕ್ತಿಯು
ಘನ ಮಂತ್ರಪಠಣ ಲೇಸೆನುತರುಹಿದೆ ॥ ೨೮ ॥

ಅನುಜನು ಪಿತೃಸೇವಾರತನಗಿ–
ದ್ದನು ದಯದಲಿ ಸನ್ಯಾಸವ ಬಯಸಲು
ಘನತರ ಭಂಡಾರಕೇರಿಮಠಕಧಿಪರು
ಮುನಿಯು ಸುರೋತ್ತಮತೀರ್ಥರೆನಿಸಿದ ॥ ೨೯ ॥
ಹರಕೆ ಮಾತೆಯದು ಸಲಿಸೆ ಭಾರತಕೆ
ಬರೆದ ವ್ಯಾಖ್ಯಾನ ಲಕ್ಷಾಭರಣ
ಮುರಮಥನಿಗರ್ಪಿಸಿ ಸಂತೈಸಿದ

ಅರವಿದೂರರನು ಪೊಗಳಲಳವೆ ಗುರೋ ॥ ೩೦ ॥

ದುರುಳರು ಪಾಚಕರಿಗೆ ಬೋಧಿಸುತಲಿ
ಗರಳ ಬೆರಸಿದ್ಧೊರಣವರ್ಪಿಸಲು
ಹರಿಯು ಭುಂಜಿಸಿ ಗರಳಗೊರಳನಾ
ಗಿರುತಿಹನೀಗಲು ಸಾಕ್ಷಿಯಹುದಿದಕೆ ॥ ೩೧ ॥

ಮತಿಭ್ರಷ್ಟರಹಿತರಾಗೆ ಸ್ವಕ್ಷೇತ್ರದಿ
ಪತಿತ ವಿಪ್ರರಿಂ ಬೆಳೆಸಿದ ಗುಳ್ಳವ-
ನತಿಭಕ್ತಿಯೊಳರ್ಪಿಸೆ ಸ್ವೀಕೃತವಹು-
ದತುಳ ಗರಳಹರವೆನಿಸಿದ ಗುರುವರ ॥ ೩೨ ॥

ವೇಲಾಪುರದಲಿ ಚನ್ನಕೇಶವನು
ಮೇಲು ರಥದಿ ಬರೆ ಕಾಣುತ ಶ್ರೀ-
ಲೋಲನ ಸ್ತುತಿಸೆ ವೈಕುಂಠದಾಸರಾ-
ವೇಳೆ ನಮಿಸೆ ಬಹು ಮಹಿಮೆಯ ತೋರಿದೆ ॥ ೩೩ ॥

ಹಯದರ್ಶನವಿತ್ತಾಕೃಷಿಕನಿಗೆ ಸು-
ನಯನದಿ ಕನಕನ ಮನವನು ಒಂದೆನಿಸೆ
ದಯಗೊಳಿಸಿ ಹರಿಯ ಪರಿಪರಿ ಭಜಿಸುತ
ಹಯವದನನಿಗೆ ಮಂಗಳ ಪಾಡಿದ ಗುರು ॥ ೩೪ ॥

ತತ್ವವಿಚಾರದಿ ಕೊಲ್ಹಾಪುರದಿ
ಕ್ಷೇತ್ರ ಚರಿಸಿ ತಿರುಪತಿಶ್ರೀಲೋಲನ
ಗಾತ್ರ ಮರೆತು ಸ್ತುತಿಸಿದ ಸೇವಕನೆಂದುತ್ತಮ
ಪುರುಷೋತ್ತಮನ ದಾಸವರ ॥ ೩೫ ॥
ಆಪಾದಶಿರ: ಸಾಲಿಗ್ರಾಮದ ಸರ
ಶ್ರೀಪತಿಗರ್ಪಿಸಿ ಸೇವಿಸುತ
ಆ ಪರಮನ ಕೃಪಾಪಾತ್ರರಾಗಿ ಮತ್ತಾ

ಪರಮೇಷ್ಠಿಯ ದತರ್ಹ ಗುರುವರ ॥ ೩೬ ॥

ಸಿರಿಕೃಷ್ಣನ ಪರ್ಯಾಯ ನಾಲ್ಕರಲಿ
ಪರಿಪರಿ ಪೂಜಿಸಿ ವಿಭವದಲಿ
ಚರಿಸಿ ಭೂವಲಯ ಕ್ಷೇತ್ರಗಳಲಿ ಮಠ
ವಿರಿಸಿ ಪದ್ಮನಾಭನನರ್ಚಿಸಿದ ಮುನಿ ॥ ೩೭ ॥

ಇಂದಿರೇಶನತಿ ಸುಂದರಾಶ್ವಮುಖ
ನೆಂದಿಗು ಹೃನ್ಮಂದಿರದಿ ಧ್ಯಾನಿಪಾ–
ನಂದ ಶರಧಿಯೊಳಗೀಸುತಿರುವ ಬಹು
ಸುಂದರ ಯತಿವರ ಭಜಕರ ಪೊರೆಯುವ ॥ ೩೮ ॥

ಪಾಜಕ ಕ್ಷೇತ್ರದಿ ಮಧ್ವರ ಪ್ರತಿಮೆಯ
ಪೂಜಿಸೆಮಂದಿರ ರಚಿಸಿ ಪ್ರತಿಷ್ಠಿಸಿ
ಮೂಜಗದೊಳಗಚ್ಚರಿಯ ಸದ್ಗ್ರಂಥ ನಿರ್–
ವ್ಯಾಜ ಭಕುತಿಯಲಿ ರಚಿಸಿ ಮೆರೆದ ಗುರು ॥ ೩೯ ॥

ಅರಸಪ್ಪನ ಅಳಿಯನ ಮೃತಿಯ ತಪ್ಪಿಸಿ
ಉಳಿಸಲು ಸ್ವಾದಿಯ ದಾನವಿತ್ತು ಬಹು
ಸರಳವಾಗಿ ಭವ್ಯ ಸೇವೆ ಸಲ್ಲಿಸಲು
ಹರಿಯ ನಿಲಿಸಿ ಕ್ಷೇತ್ರವೆನಿಸಿ ರಾಜಿಪ ॥ ೪೦ ॥

ಅಂಧತೆಯಲಿ ಶ್ರೀಕೃಷ್ಣನ ದರ್ಶನ–
ಕೆಂದು ಬಂದೊಡನೆ ಕಂಡು ಮನದಣಿಯೆ
ವಂದಿಸೆ ಸ್ತುತಿಸುತ ಸ್ವಾದಿಗೆ ಮರುಳುತಾ–
ನಂದತೀರ್ಥರನು ಸ್ಮರಿಸಿದ ಗುರುವರ ॥ ೪೧ ॥
ವೇದವೇದ್ಯರನು ಪೀಠದಿ ನಿಲಿಸುತ
ಮೋದದಿ ಕೃಷ್ಣನ ಸೇವೆ ಸಲಿಸುತ
ಮೇದಿನಿ ಸುರರನು ಮುದಗೊಳಿಸಿ ಹರಿ

ಬಾದರಯಣರ ಸ್ಮರಿಸಿ ನಮಿಸಿದೆ ॥ ೪೨ ॥

ಬದರಿಕಾಶ್ರಮಕೆ ಕಳಿಸಿ ಭೂತರಾಜನ
ಮುದದಿ ತ್ರಿವಿಕ್ರಮ ಮೂರ್ತಿಯ ತರಿಸಿ
ಸದನವ ಸೇವೆಗೆ ನೃಪನು ವಿರಚಿಸಿರೆ
ಅಮೃತೋತ್ಸವ ನಡೆಸಿ ಹರುಷಿಸಿದೆ ॥ ೪೩ ॥

ಉತ್ತರ ಭಾಗದಿ ದಿವ್ಯಸರಃ ಸ್ಥಿತ
ಕರ್ತೃಭೂತ ನಾರಾಯಣ ಭಕ್ತನ
ನಿತ್ಯ ಸೇವೆ ಧನಗಳಿಸೆ ಹರಿಕೃಪಾ
ಪಾತ್ರನ ಮಾಡಿಸಿ ಪೊರೆಯುತಲಿರುವ ॥ ೪೪ ॥

ಕಲಿಪರಮಾವಧಿ ವಿಂಶಮಸಮ ಸಮ
ಸಲಿಸೆ ಸೇವೆ ಹರಿಗುರು ಜನ ಸುಜನರ
ಕಲುಷದೂರನೆನಿಸಿ ಹರುಷಗೊಳಿಸೀ
ವಿಲಸಿತ ಭೂವಲಯದಿ ಮೆರೆಯುತಲಿರುವ ॥ ೪೫ ॥

ಬೃಂದಾವನ ಪಂಚಕವು ತ್ರಿಮೂರ್ತಿಗಳಿಂದ
ವಾಯು ಮತ್ಸ್ಯಾದಿಗಳಿಂದ ಶೋ-
ಭಿಸೆ ಸುರೇಂದ್ರದೂತರಿಗೆ ಒಂದೆರಡು
ದಿನದಿ ಬರುವೆವೆನುತ ಅರುಹಿದ ॥ ೪೬ ॥

ಬೃಂದವನಯಾತ್ರೆಯೆ ಮಹಾಯಾತ್ರೆಯು
ಎಂದು ತಿಳಿದು ಸುಜನರು ಸತತ
ಬಂದು ನಿಂದು ಉತ್ಸವದಿ ಪ್ರಸಾದವ
ಪೊಂದೆ ಜನುಮ ಸಫಲವೆಂದು ಅರುಹಿದೆ ॥ ೪೭ ॥

॥ ಶ್ರೀವಾದಿರಾಜಗುರ್ವಂತರ್ಗತ ಶ್ರೀಮಧ್ವೇಶಾರ್ಪಣಮಸ್ತು ॥

ಋಣ:- (ಪುಸ್ತಕ)ಹರಿದಾಸರು ಕಂಡ ಶ್ರೀವಾದಿರಾಜರು

ಗಣಕೀಕರಣ: ಹರೀಶ ಕೆಂಪದಾಳಿಹಳ್ಳಿ